ಅಸಲು ದಾವೆ ನಂ.ಃ115/2014
ಪಿಡಬ್ಲ್ಯೂ - 1

ದಿನಾಂಕ 07-08-2019 ರಂದು ಪುನಃ ಸಾಕ್ಷಿಗೆ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

**ಪಾಟೀ ಸವಾಲುಃ 1, 2, 4, 6 ಮತ್ತು 7ನೇ ಪ್ರತಿವಾದಿಯರ ಪರ ಶ್ರೀ ಬಿ.ಬಿ ವಕೀಲರಿಂದ.**

ನಾನು ಮೊದಲು ವ್ಯಾಪಾರ ಮಾಡುತ್ತಿದ್ದೆ ಈಗ ಚಾಲಕ ವೃತ್ತಿ ಮಾಡುತ್ತಿದ್ದೇನೆ. ನಾನು ಈ ಮೊದಲು ಜೇವರ್ಗಿಯ ಮುನ್ಸಿಪಾಲ್ಟಿಯ ಕಾಂಪ್ಲೆಕ್ಸನಲ್ಲಿರುವ ಮಳಿಗೆಗಳಲ್ಲಿ ಕಿರಾಣ ವ್ಯಾಪಾರ ಮಾಡುತ್ತಿದ್ದೆ. ನಾನು ಮುನ್ಸಿಪಾಲ್ಟಿಯ ಕಾಂಪ್ಲೆಕ್ಸನ ಒಂದು ಮಳಿಗೆಯಲ್ಲಿ ಸ್ವಂತ ಕಿರಾಣ ವ್ಯಾಪಾರ ಮಾಡುತ್ತಿದ್ದೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. 2ನೇ ವಾದಿ ಎಲೆಕ್ಟ್ರಿಕಲ್ ಕೆಲಸ ಮಾಡುತ್ತಾರೆ. ನಾನು ಕಳೆದ 20 ವರ್ಷಗಳಿಂದ ಲಾರಿ ಡ್ರೈವರ್ ಅಂತಾ ಕೆಲಸ ಮಾಡುತ್ತಿದ್ದೇನೆ. 8ನೇ ಪ್ರತಿವಾದಿ ಈ ದಾವೆ ಸಲ್ಲಿಸುವುದಕ್ಕಿಂತ ಮೊದಲು ವಿಡಿಯೋ ಹಾಲ್ ನಡೆಸುತ್ತಿದ್ದರು ಈಗ ಏನೂ ಕೆಲಸ ಮಾಡುತ್ತಿಲ್ಲ. ದಾವಾ ಆಸ್ತಿಗಳು ನಮ್ಮ ತಂದೆಯ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲದ ಯಾವುದೇ ಆಸ್ತಿ ನಮ್ಮ ತಂದೆಯ ಹೆಸರಿನಲ್ಲಿ ಇಲ್ಲ ಎಂದರೆ ಸರಿ. ನಮ್ಮ ಅಜ್ಜನಿಂದ ಬಂದ ಒಂದು ಮನೆ ಇದೆ ಅದರ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಬಹುದು. ನಮ್ಮ ತಂದೆ 1991ನೇ ಇಸವಿಯಲ್ಲಿ ತೀರಿಕೊಂಡಿದ್ದಾರೆ. ನನ್ನ ಮದುವೆಯು 1996ನೇ ಇಸವಿಯಲ್ಲಿ ಆಗಿದೆ. 2ನೇ ವಾದಿಯ ಮದುವೆ ನನ್ನ ಮದುವೆಗಿಂತ ಮೂರ್‍ನಾಲ್ಕು ವರ್ಷ ಮೊದಲು ಆಗಿದೆ. 8ನೇ ಪ್ರತಿವಾದಿಯ ಮದುವೆ ನನ್ನ ಮದುವೆಗಿಂತ 8 ವರ್ಷ ಮೊದಲು ಆಗಿದೆ. ಮದುವೆಯಾದ ನಂತರ ನಾವೆಲ್ಲ ಅಣ್ಣ-ತಮ್ಮಂದಿರು ಬೇರೆಯಾಗಿದ್ದೇವೆ ಎಂದರೆ ಸರಿ ಅಲ್ಲ. ನಾವೆಲ್ಲರೂ ಒಟ್ಟಾಗಿದ್ದೇವು. ಮದುವೆಯಾದ ನಂತರ ನಾವು ಒಟ್ಟಾಗಿದ್ದೇವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. 1ನೇ ಪ್ರತಿವಾದಿ 1999ನೇ ಇಸವಿಯಿಂದ ಕಿರಾಣ ವ್ಯಾಪಾರ ಮಾಡುತ್ತಿದ್ದಾರೆ ಎಂದರೆ ಸರಿ ಅಲ್ಲ. 1993ನೇ ಇಸವಿಯಲ್ಲಿ ಜೇವರ್ಗಿಯ ಟಿಎಮ್‌ಸಿ ಯವರು 1ನೇ ಪ್ರತಿವಾದಿಯ ಹೆಸರಿನಲ್ಲಿ ಕಿರಾಣ ವ್ಯಾಪಾರ ಮಾಡಲು ಲೈಸನ್ಸ ಕೊಟ್ಟಿದ್ದಾರೆ ಮತ್ತು ಅದರ ಬಗ್ಗೆ ಒಂದು ಕರಾರು ಪತ್ರ ಇದೆ ಎಂದರೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಟಿಎಮ್‌ಸಿ ಯವರ ಮಳಿಗೆ ಖಾಲಿ ಮಾಡುತ್ತಿಲ್ಲ ಎಂದು ಟಿಎಮ್‌ಸಿಯವರು 1ನೇ ಪ್ರತಿವಾದಿಯ ಮೇಲೆ ಎವಿಕ್ಷನ್ ದಾವೆ ಸಲ್ಲಿಸಿದ್ದರು ಎಂದರೆ ಸರಿ. 1993ನೇ ಇಸವಿಗಿಂತ ಮೊದಲು 1ನೇ ಪ್ರತಿವಾದಿಯು ಕಿರಾಣ ವ್ಯಾಪಾರವಾಗಲೀ ಅಥವಾ ಯಾವುದೇ ವ್ಯವಹಾರವಾಗಲೀ ಮಾಡುತ್ತಿರಲಿಲ್ಲ ಎಂದರೆ ಸರಿ. ಕಿರಾಣ ವ್ಯಾಪಾರ ಕೇವಲ 1ನೇ ಪ್ರತಿವಾದಿ ಮಾಡುತ್ತಿದ್ದ ಎಂದರೆ ಸರಿ ಅಲ್ಲ. ದಾವಾ ಅನುಸೂಚಿಯ 1ನೇ

ಅನುಕ್ರಮಾಂಕದ ಆಸ್ತಿಯನ್ನು 1 ಮತ್ತು 4 ನೇ ಪ್ರತಿವಾದಿಯರು ತಮ್ಮ ಸ್ವಂತ ಆದಾಯದಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿ ಅಲ್ಲ. ದಾವಾ ಅನುಸೂಚಿಯ 2 ನೇ ಅನುಕ್ರಮಾಂಕದ ಆಸ್ತಿಯನ್ನು 2 ನೇ ಪ್ರತಿವಾದಿಯು ತನ್ನ ಸ್ವಂತ ಆದಾಯದಿಂದ ಖರೀದಿ ಮಾಡಿದ್ದಾನೆ ಎಂದರೆ ಸರಿ ಅಲ್ಲ. 2 ನೇ ಪ್ರತಿವಾದಿ ಚಿಕ್ಕವನಿದ್ದಾನೆಂದು 2 ನೇ ಪ್ರತಿವಾದಿಯ ಹೆಸರಿನಲ್ಲಿ ಎಲ್ಲರೂ ಕೂಡಿ ಆಸ್ತಿ ಖರೀದಿ ಮಾಡಿದ್ದೇವು. ದಾವಾ ಅನುಸೂಚಿಯ 7 ನೇ ಅನುಕ್ರಮಾಂಕದ ಆಸ್ತಿಯನ್ನು 4 ನೇ ಪ್ರತಿವಾದಿಯು ತನ್ನ ಸ್ವಂತ ಆದಾಯದಿಂದ ಖರೀದಿ ಮಾಡಿದ್ದಾನೆ ಎಂದರೆ ಸರಿ ಅಲ್ಲ. 5 ನೇ ಪ್ರತಿವಾದಿಯ ಗಂಡ ತೀರಿಕೊಂಡಿದ್ದಾರೆ ಎಂದರೆ ಸರಿ. 5 ನೇ ಪ್ರತಿವಾದಿಯ ಗಂಡನಿಗೆ ಸೇರಿದ ಆಸ್ತಿಯು ಕಲಬುರಗಿಯಲ್ಲಿ ಇತ್ತು ಎಂದರೆ ಸರಿ ಒಂದು ಮನೆ ಇತ್ತು. 5 ನೇ ಪ್ರತಿವಾದಿ ತನ್ನ ಗಂಡನ ಕಲಬುರಗಿಯಲ್ಲಿದ್ದ ಮನೆ ಗಂಡ ತೀರಿಕೊಂಡ ನಂತರ ಮಾರಾಟ ಮಾಡಿದ್ದಾರೆ ಎಂದರೆ ಸರಿ ಅಲ್ಲ ಅವರು ಗಂಡ-ಹೆಂಡತಿ ಜೀವಂತ ಇದ್ದಾಗ ಮಾರಾಟ ಮಾಡಿದ್ದಾರೆ. 5 ನೇ ಪ್ರತಿವಾದಿ ತನ್ನ ಗಂಡನ ಮನೆಯನ್ನು ಮಾರಿ ದಾವಾ ಅನುಸೂಚಿಯ 4 ರಿಂದ 6 ನೇ ಕ್ರಮಾಂಕದ ಆಸ್ತಿಗಳನ್ನು ತಮ್ಮ ಸ್ವಂತ ಹಣದಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿ ಅಲ್ಲ. ದಾವಾ ಅನುಸೂಚಿಯ 3 ನೇ ಕ್ರಮಾಂಕದ ಜಮೀನನ್ನು 1, 4 ಮತ್ತು 5 ನೇ ಪ್ರತಿವಾದಿಯರು ತಮ್ಮ ಸ್ವಂತ ಆದಾಯದಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿ ಅಲ್ಲ, ಸಾಕ್ಷಿದಾರರು ಮುಂದುವರೆದು ನಮ್ಮ ತಾಯಿಯ ಹೆಸರಿನಲ್ಲಿ ಶಹಾಬಾದ ಪಟ್ಟಣದ ಹೊರವಲಯದಲ್ಲಿದ್ದ ಜಮೀನನ್ನು ಮಾರಾಟ ಮಾಡಿ ಅದರಿಂದ ಬಂದ ಹಣದಿಂದ 3 ನೇ ಕ್ರಮಾಂಕದ ಆಸ್ತಿಯನ್ನು ಖರೀದಿ ಮಾಡಲಾಗಿದೆ ಎನ್ನುತ್ತಾರೆ. ಶಹಾಬಾದ ಪಟ್ಟಣದಲ್ಲಿದ್ದ ಜಮೀನು ನಮ್ಮ ತಂದೆ ಖರೀದಿ ಮಾಡಿ ನಮ್ಮ ತಾಯಿಯ ಹೆಸರಿನಲ್ಲಿ ಮಾಡಿದ್ದರು. ಶಹಾಬಾದದಲ್ಲಿದ್ದ ಜಮೀನಿನ ಖರೀದಿಯ ಕ್ರಯಪತ್ರ ನಮ್ಮ ತಾಯಿಯ ಹೆಸರಿನಲ್ಲಿದೆ ಎಂದರೆ ಸರಿ. ಶಹಾಬಾದಲ್ಲಿದ್ದ ಒಟ್ಟು ಜಮೀನು 9 ಎಕರೆ 20 ಗುಂಟೆ ಜಮೀನು ಇತ್ತು ಮತ್ತು ಅದರಲ್ಲಿ ನಮ್ಮ ತಾಯಿ 7 ಎಕರೆ ಜಮೀನು ಮಾರಾಟ ಮಾಡಿದ್ದಾಳೆ ಎಂದರೆ ಸರಿ. ಶಹಾಬಾದ ಪಟ್ಟಣದಲ್ಲಿ ಮಾರಾಟ ಮಾಡಿ ಉಳಿದ 2 ಎಕರೆ 20 ಗುಂಟೆ ಜಮೀನು ನಮ್ಮ ತಾಯಿ 2 ನೇ ಪ್ರತಿವಾದಿಗೆ ದಾನ ಮಾಡಿದ್ದಾರೆ ಎಂದರೆ ಸರಿ ಅಲ್ಲ. ಶಹಾಬಾದ ಪಟ್ಟಣದಲ್ಲಿನ 7 ಎಕರೆ ಜಮೀನು ಮಾರಾಟ ಮಾಡಿ 3 ನೇ ಕ್ರಮಾಂಕದ ಜಮೀನನ್ನು 1, 4 ಮತ್ತು 5 ನೇ ಪ್ರತಿವಾದಿಯರು ಖರೀದಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ವಿಡಿಯೋ ಥಿಯೆಟರನ ಲೈಸನ್ಸ 2 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸರಿ. ವಿಡಿಯೋ ಥಿಯೆಟರನ ಎಲ್ಲಾ ವ್ಯವಹಾರಗಳನ್ನು 2 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದ ಎಂದರೆ ಸರಿ ಅಲ್ಲ 8 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು. ವಾದಿ ಮತ್ತು ಪ್ರತಿವಾದಿಯರೆಲ್ಲರೂ

ವಿಡಿಯೋ ಥಿಯೆಟರ ಮತ್ತು ಕಿರಾಣ ಅಂಗಡಿಯ ಎಲ್ಲಾ ವ್ಯವಹಾರ ನೋಡಿಕೊಳ್ಳುತ್ತಿದ್ದರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. 1, 2 ಮತ್ತು 4 ನೇ ಪ್ರತಿವಾದಿಯರು ದಾವಾ ಅನುಸೂಚಿಯ 1 ಮತ್ತು 2 ನೇ ಅನುಕ್ರಮಾಂಕದ ಆಸ್ತಿಗಳನ್ನು 5 ನೇ ಪ್ರತಿವಾದಿಗೆ ದಾನ ಮಾಡಿದ್ದಾರೆ ಎಂದರೆ ಸರಿ ಅಲ್ಲ. ಓ.ಎಸ್ ನಂಬರ 86/2014 ರಲ್ಲಿ 1, 2 ಮತ್ತು 4 ನೇ ಪ್ರತಿವಾದಿಯರು 5 ನೇ ಪ್ರತಿವಾದಿಗೆ ದಾನ ಮಾಡಿದ್ದಾರೆಂದು ಆದೇಶ ಆಗಿದೆ ಎಂದರೆ ಸರಿ ಅಲ್ಲ. ದಾವಾ ಆಸ್ತಿಗಳು 1, 2, 4 ಮತ್ತು 5 ನೇ ಪ್ರತಿವಾದಿಯರ ಸ್ವಂತ ಆಸ್ತಿಗಳಾಗಿವೆ ಎಂದರೆ ಸರಿ ಅಲ್ಲ. ನನಗೆ ಮತ್ತು 2 ನೇ ವಾದಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿ ಅಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲುಃ 5 ನೇ ಪ್ರತಿವಾದಿಯ ಪರ ಶ್ರೀ ಜೆ.ವಿ.ಹೆಚ್ ವಕೀಲರು ಪಾಟೀ ಸವಾಲೀಗಾಗಿ ಕಾಲಾವಕಾಶ ಕೋರಿದರು, ಕೋರಿಕೆಯ ಮೇರೆಗೆ ರೂ.100/- ಖರ್ಚಿನೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇರುತ್ತದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ